ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖು 10ನೆ ಅಕ್ಟೋಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, —ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ, ಸರ್ಕಾರಿ ಕಣ್ಣು ಆಸ್ಪತ್ರೆ ಮತ್ತು ಪ್ರಸು ಆಸ್ಪತ್ರೆ ಇವುಗಳಲ್ಲಿ ಪ್ರತಿ ದಿವಸವೂ ಬೆಳಿಗ್ಯೆ 7ರ ಲಾಗಾಯಿತು 10 ಘಂಟೆ ವರವಿಗೂ, ಮತ್ತು ಮಧ್ಯಾನ್ನ 4ರ ಲಾಗಾಯಿತು 5 ಘಂಟೆ ವರವಿಗೂ, ಹಾಫ್‌ಕಿನ್ಸ್ ಪ್ರೊಫೈಲಾಕ್ಟಿಕ್ ಯಾನೆ ಧೃತಿ ಮೂಲಕ, ಪ್ಲೇಗ್ ಜಾಡ್ಯ ತಗಲದೆ ಇರಲು, ಸ್ವಲ್ಪವೂ ಅಪಾಯವಿಲ್ಲದಂತೆ, ಇನಾಕ್ಯುಲೇಷ್ಟ ಮಾಡಲ್ಪಡುತ್ತೆ.

ಈಗ ವ್ಯಾಪಿಸಿರುವ ಪ್ಲೇಗ್ ಅಂಟುಜಾಡ್ಯದಿಂದ ಇನಾಕ್ಯುಲೇಷ್ಟ ಮೂಲಕ ನಿರುಪಾಧಿಕತೆಯನ್ನು ಹೊಂದಲು ಈತೊಹಲ ವುಳ್ಳವರೆಲ್ಲರೂ ಮೇಲೆ ಹೇಳಿರುವ ಆಸ್ಪತ್ರೆಗಳ ಛಾರ್ಜಿನಲ್ಲಿ ಇರುವ ಡಾಕ್ಟರುಗಳಲ್ಲಿ ಹೋಗಬಹುದು.

ಹೆಚ್. ಹೆಚ್. ಸ್ಪ್ಲಾರ್ಕ್ಸ್,
ಪ್ರೆಸಿಡೆಂಟ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋ ಟಿ ಸ್ .

ತಾರೀಖು 7ನೆ ಅಕ್ಟೋಬರು 1903.

ಮೆಸ್ಸರ್ಸ್ ಲಾಂಗ್‌ಮ್ಯಾನ್ಸ್ ಗ್ರೀನ್ ಅಂಡ್ ಕೋ ಯವರಿಂದ ರಚಿಸಲ್ಪಟ್ಟ ಈ ಕೆಳಗಡೆ ನಮೂದಿಸಿರುವ ಹೊರಗಡೆ ಆಕಾರವನ್ನು ಮಾತ್ರ ತೋರಿಸುವ (Out line maps) ವ್ಯಾಪ್‌ಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ ಬಂದಕ್ಕೆ ನಾಲ್ಕು ಕಾಸುಗಳು:—

ಯೂರೋಪ್—ವರ್ಲ್ಡ್—ಏಷಿಯಾ—ಇಂಗ್ಲೆಂಡ್ ಮತ್ತು ವೇಲ್ಸ್—ಸ್ಕಾಟ್‌ಲೆಂಡ್—ಮತ್ತು ಇಂಡಿಯಾ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಗೆಜೆಟ್ ಇಸ್ತಿಹಾರ್.

ಮೈಸೂರ ಗೆಜೆಟ್ ಕಂಪೈಲರವರು ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಪೋಸ್ಟ್‌ಗೆ ಕಳುಹಿಸಲ್ಪಡುವ ದರೋಬಸ್ತು ಗೆಜೆಟ್ ಕಾಪಿಗಳು ಅವುಗಳು ರವಾನಿಸುವದಕ್ಕೆ ತತ್ಪೂರ್ವವೆ ಕ್ರಮವಾದ ತನಿಖೆ ಮತ್ತು ಮೊಕಾಬಿಲೆ ಮಾಡುವ ಪದ್ಧತಿಯು ಇಟ್ಟ ರೋಣದರಿಂದ ಸದರೀ ಕಾಪಿಗಳು ಗೈರಿವಿಲೆ ಆಥವಾ ವಿಳಾಸದಾರರುಗಳಿಗೆ ಪಾವತಿ ಆಗದೆ ಇರುವ ವಿಷಯದಲ್ಲಿ ಕಂಪೈಲರ್ರವರು ಜವಾಬುದಾರರಾಗಿರುವದಿಲ್ಲ ಮತ್ತು ಅಂಥಾ ಗೈರಿವಿಲೆಯಾದ ಕಾಪಿಗಳಿಗೆ ಬದಲಾಗಿ ಎರಡನೇ ಕಾಪಿಗಳು ಕೊಡಲ್ಪಡಲಾರವು.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

Mysore Government Central Press, Bangalore—1903.